ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ

ಸಿ.ಸಿ. ನಂಬ್ರಃ **198/2024**
ಸಿ.ಡಬ್ಲ್ಯೂ-**10**
ಪಿ.ಡಬ್ಲ್ಯೂ-**10**

| | | |
|---|---|---|
| ಸಾಕ್ಷಿದಾರರ ಹೆಸರು | : | ಬಿ ಸಿ ರವೀಂದ್ರ |
| ತಂದೆಯ ಹೆಸರು | : | ಬಿ ಸಿ ಚೆನ್ನಯ್ಯ |
| ಪ್ರಾಯ | : | 69 ವರ್ಷ |
| ಉದ್ಯೋಗ | : | ನಿವೃತ್ತ ಸಹಾಯಕ ನಿರ್ದೇಶಕರು ಬಂದೂರು ಪರೀಕ್ಷೆ ವಿಭಾಗ ನ್ಯಾಯ ವಿಜ್ಞಾನ ಪ್ರಯೋಗಾಲಯ ಬೆಂಗಳೂರು |
| ವಾಸ | : | ಮಂಗಳೂರು |

ದಿನಾಂಕಃ 03-09-2025 ರಂದು ಸಾಕ್ಷಿಗೆ ಪ್ರಮಾಣವಚನ ಭೋಧಿಸಲಾಯಿತು

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಹಕರಿಂದ

ನಾನು 1985 ರಿಂದ ಜೂನ್ -2017 ರವರೆಗೆ ನ್ಯಾಯ ವಿಜ್ಞಾನ ಪ್ರಯೋಗ ಶಾಲೆ ಬೆಂಗಳೂರಿನಲ್ಲಿ ವಿವಿಧ ಹುದ್ದೆಗಳಲ್ಲಿ ಕೆಲಸ ಮಾಡಿ ಸಹಾಯಕ ನಿರ್ದೇಶಕನಾಗಿ ನಿವೃತ್ತಿ ಹೊಂದಿರುತ್ತೇನೆ.

2. ದಿಃ 25-10-2013 ರಂದು ಶಂಕರನಾರಾಯಣ ಪೊಲೀಸ್ ಠಾಣೆ ಯ ಅ.ಸಂ. 96/2013 ಕ್ಕೆ ಸಂಬಂಧಪಟ್ಟಂತೆ ಒಂದು ವಸ್ತುವನ್ನು ಪರೀಕ್ಷೆಗಾಗಿ ನ್ಯಾಯ ವಿಜ್ಞಾನ ಪ್ರಯೋಗ ಶಾಲೆಗೆ ಪಿಸಿ ನಂ.2467 ರವರು ತಂದು ಕೊಟ್ಟಿದ್ದು ಅದನ್ನು ಅಂದಿನ ಸ್ವಾಗತಗಾರ್ತಿಯಾದ ಶ್ರೀಮತಿ ಗುಂಡಮ್ಮ ಪಾಟೀಲವರವರು ಸ್ವೀಕರಿಸಿ ಅದೇ ದದಿನ ನನಗೆ ಪರೀಕ್ಷೆಗಾಗಿ ತಂದು ಕೊಟ್ಟಿದ್ದು ಅದು ಬಿಳಿ ಬಟ್ಟೆಯಲ್ಲಿ ಪ್ಯಾಕ್ ಮಾಡಿ ಸೀಲು ಮಾಡಿದ್ದು, ಸೀಲುಗಳು ಸಹಜ ಸ್ಥಿತಿಯಲ್ಲಿದ್ದು ತನಿಖಾಧಿಕಾರಿ ಕಳುಹಿಸಿ ಮಾದರಿ ಸೀಲಿಗೆ ಹೋಲಿಕೆಯಾಗುತ್ತಿತ್ತು.

3. ದಿಃ 25-10-2013 ರಂದು ನಾನು ಆ ವಸ್ತುವನ್ನು ಪರೀಕ್ಷೆಗಾಗಿ ತೆಗೆದುಕೊಂಡಿದ್ದು, ಅದನ್ನು ಬಿಚ್ಚಿ ನೋಡಲಾಗಿ ಒಂದು ಒಂಟಿ ನಳಿಕೆಯ ಮಸಿ ತುಂಬುವ ಕೋವಿ ಇದ್ದು ಅದನ್ನು ವೈಜ್ಞಾನಿಕವಾಗಿಯು ಮತ್ತು ಪ್ರಕ್ಷೇಪವಾಗಿ (ಬ್ಯಾಕೆಸ್ಟಿಕ್) ಪರೀಕ್ಷೆಗಾಗಿ ಈ ಕೆಳಗಿನಂತೆ ಅಬಿಪ್ರಾಯ ನೀಡಿರುತ್ತೇನೆ. ಸದರಿ ಬಂದೂಕು ಅಗ್ನಿ ಅಸ್ತ್ರವಾಗಿರುತ್ತದೆ. ಅದನ್ನು ಕಾನೂನು ಬಾಹೀರವಾಗಿ ತಯಾರಿಸಲ್ಪಟ್ಟಿರುತ್ತದೆ. ಸದರಿ ಬಂದೂಕದ

ನಳಿಕೆಯಲ್ಲಿ ಗುಂಡು ಹಾರಿಸುವ ನಿಶಾನೆ ಕಂಡುಬರುತ್ತದೆ (ಗುಂಡು ಹಾರಿಸಿರುವುದು) ಕಂಡುಬರುತ್ತದೆ. ಆದರೆ ಗುಂಡು ಹಾರಿಸಿದ ನಿಖರವಾದ ಸಮಯ ಹಾಗೂ ದಿನಾಂಕವನ್ನು ಹೇಳಲು ಬರುವುದಿಲ್ಲ.

4. ಸದರಿ ಬಂದೂಕನ್ನು ನಾನು ಪರೀಕ್ಷೆ ಮಾಡುವಾಗ ಚಾಲನಾ ಸ್ಥಿತಿಯಲ್ಲಿ ಇತ್ತು. ಸದರಿ ಬಂದೂಕದ ಗುರಿ ನೋಡುವ ಪರಿಮಿತಿ 40 ಗಜಗಳಾಗಿರುತ್ತದೆ. ಅದರಂತೆ ನಾನು ವರದಿಯನ್ನು ನೀಡಿರುತೇನೆ ಎಂದು ನುಡಿದು, ಸದರಿ ವರದಿ ಹಾಗೂ ಸದರಿ ವರದಿಯೊಂದಿಗೆ ನಾನು ಪರೀಕ್ಷೆ ಮಾಡಲು ಅಳವಡಿಸಿಕೊಂಡ ವಿಧಾನ ಹಾಗೂ ನನ್ನ ಅಬಿಪ್ರಾಯಕ್ಕೆ ಬಂದ ಕಾರಣಗಳನ್ನು ನೀಡಿರುತ್ತೇನೆ ಎಂದು ನುಡಿದಿದ್ದು ಸದರಿ ವರದಿ ಹಾಗೂ ಅಳವಡಿಸಿಕೊಂಡ ವಿಧಾನ ಮತ್ತು ಅಬಿಪ್ರಾಯಕ್ಕೆ ಸಂಬಂಧಪಟ್ಟ ದಾಖಲೆ ಈಗಾಗಲೇ ನಿಪಿ-7 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-7(ಬಿ) ಎಂದು ಗುರುತಿಸಲಾಯಿತು ಹಾಗೂ ಮಾದರಿ ಸೀಲನ್ನು ಈಗಾಗಲೇ ನಿಪಿ-8 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-8(ಬಿ) ಎಂದು ಗುರುತಿಸಲಾಯಿತು.

5. ನನ್ನ ಪರೀಕ್ಷೆ ಮುಗಿದ ಬಳಿಕ ಆ ವಸ್ತುವನ್ನು ಪುನಃ ಪ್ಯಾಕ್ ಮಾಡಿ ಸೀಲು ಮಾಡಿ ಮಾದರಿ ಮೊಹರಿನೊಂದಿಗೆ ಸಂಬಂಧಪಟ್ಟ ಪೊಲೀಸ್ ಠಾಣೆ ಗೆ ತಲುಪಿಸಿರುತ್ತೇನೆ. ಸಾಕ್ಷಿ ಈಗ ಕೋವಿಯನ್ನು ನೋಡಿ ನಾನು ಪರೀಕ್ಷಿಸಿದ ಕೋವಿ ಇದೆ ಇರುತ್ತದೆ ಎಂದು ನುಡಿದು ಸದರಿ ಕೋವಿಯಲ್ಲಿ ನನ್ನ ಚಿಕ್ಕ ಸಹಿ ಇರುತ್ತದೆ ಎಂದು ಗುರುತಿಸಿದ್ದು, ಸದರಿ ಚಿಕ್ಕ ಸಹಿಯನ್ನು ಮು.ಮಾ.1(ಎ) ಎಂದು ಗುರುತಿಸಲಾಯಿತು.

<u>ಪಾಟಿ ಸವಾಲುಃ ಆರೋಪಿತರ ಪರ ಶ್ರೀ. ವೈ ಎನ್ ಕೆ . ವಕೀಲರಿಂದ</u>

ನಾನು ಈ ಪ್ರಕರಣದ ತನಿಖಾಧಿಕಾರಿಯ ಒತ್ತಡಕ್ಕೆ ಒಳಗಾಗಿ ಸುಳ್ಳು ವರದಿಯನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

ಓದಿ ಹೇ, ಕೇ, ಸರಿ ಇದೆ. ನನ್ನ ಹೇ. ಮೇ. ಬೆ. ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾದೀಶರು
ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ